C.C.No.1241/2021
PW-10
CW-04

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ., ಪಾವಗಡ ನ್ಯಾಯಾಲಯ**

**ಸಿ.ಸಿ. ಸಂಖ್ಯೆ 1241/2021**

**ಪ್ರಾಸಾಃ 10**

**ಚಾಸಾಃ 04**

**<u>ದಿನಾಂಕ 20.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು</u>**

| | | |
|---|---|---|
| ಸಾಕ್ಷಿದಾರರ ಹೆಸರು | - | ನಾಗರಾಜಪ್ಪ |
| ತಂದೆಯ ಹೆಸರು | - | ಮುದ್ದಪ್ಪ |
| ವಯಸ್ಸು | - | 60 ವರ್ಷ |
| ವೃತ್ತಿ | - | ವ್ಯವಸಾಯ |
| ವಾಸ ಸ್ಥಳ | - | ಕನ್ನಮೇಡಿ |

**<u>ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ ರವರಿಂದಃ</u>**

ಐದು ವರ್ಷದ ಹಿಂದೆ ನಮ್ಮ ಮನೆಯಲ್ಲಿ ಹಣ ಕಳ್ಳತನವಾಗಿತ್ತು. ನಮ್ಮ ಮನೆಯಿಂದ ರೂ.24,000/- ಹಣವನ್ನು ಯಾರೋ ಕಳ್ಳತನ ಮಾಡಿದ್ದರು. ನಮ್ಮ ಮಾವನಿಗೆ ಹುಷಾರಿಲ್ಲ ಎಂದು ನಾನು ನಮ್ಮ ಮಾವನ ಮನೆಗೆ ಹೋದಾಗ ಕಳ್ಳತನವಾಗಿತ್ತು. ಈ ಬಗ್ಗೆ ದೂರು ನೀಡಿದ್ದೇನೆ. ಸಾಕ್ಷಿ ದೃಢೀಕೃತ ದೂರನ್ನು ನೋಡಿ ತಮ್ಮ ಹೆಬ್ಬೆಟ್ಟಿನ ಗುರುತನ್ನು ಗುರುತಿಸಿರುತ್ತಾರೆ. ಅದನ್ನು ನಿಪಿ-11 ಎಂದು ಗುರುತಿಸಲಾಯಿತು. ಪೋಲಿಸ್ ನವರು ನಮ್ಮ ಮನೆಯಲ್ಲಿ ಕಳ್ಳತನವಾದ ಹಣದ ಪೈಕಿ ರೂ.15,000/- ಸಿಕ್ಕಿದೆ ಎಂದು ಹಣ ಕೊಟ್ಟಿದ್ದಾರೆ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಪಿ.ಹೆಚ್.ಎಸ್. ವಕೀಲರಿಂದಃ</u>

ನಿಪಿ-11 ನ್ನು ಪೋಲಿಸ್ ರವರು ಬರೆದರು ಎಂದರೆ ಸರಿ. ಅವರು ಬರೆದ ದೂರಿಗೆ

ನಾನು ಹೆಬ್ಬೆಟ್ಟಿನ ಗುರುತನ್ನು ಹಾಕಿದ್ದೇನೆ ಎಂದರೆ ಸರಿ. ಅದರಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿ.

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚುಮಾಡಲಾಯಿತು.)

**ಓ . ಹೇ. ಕೇ. ಸರಿ ಇದೆ.**

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್. ಸಿ.,
ಪಾವಗಡ